ರೈತರಿಗೆ ಸಾಲ ಮಂಜೂರಾತಿ

ಪ್ರಶ್ನೆ ಸಂಖ್ಯೆ 6 : (54)

ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)

ಅ) ದಿನಾಂಕ:01.07.2011 ರಿಂದ 30.06.2012 ರವರೆಗೆ ಎಷ್ಟು ರೈತರಿಗೆ ಸಾಲ ಮಂಜೂರು ಮಾಡಲಾಗಿದೆ (ವಿವರ ನೀಡುವುದು);

ಆ) ಎಷ್ಟು ಮೊತ್ತದ ಸಾಲವನ್ನು ಮಂಜೂರು ಮಾಡಲಾಗಿದೆ; ಎಷ್ಟು ಮೊತ್ತ ವಿತರಿಸಲಾಗಿದೆ;

ಇ) ಇವರುಗಳ ಪೈಕಿ ಎಷ್ಟು ರೈತರು ಸಾಲವನ್ನು ಮರುಪಾವತಿ ಮಾಡಿರುತ್ತಾರೆ, ಮೊತ್ತವೆಷ್ಟು?

ಮಾನ್ಯ

ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಸಚಿವರು)

ಅ) ದಿನಾಂಕ: 01.07.2011 ರಿಂದ 30.06.2012 ರವರೆಗೆ 17,77,003 ಜನ ರೈತರಿಗೆ ಸಹಕಾರ ಕೃಷಿ ಪತ್ತಿನ ಸಂಘಗಳಿಂದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ಮಂಜೂರು ಮಾಡಲಾಗಿದೆ.

ಆ) ದಿನಾಂಕ: 01.07.2011 ರಿಂದ 30.06.2012 ರವರೆಗೆ ರೂ.7279.56 ಕೋಟಿಗಳಷ್ಟು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲವನ್ನು ಮಂಜೂರು ಮಾಡಿದ್ದು, ಈ ಪೈಕಿ ರೂ.6416.72 ಕೋಟಿಗಳಷ್ಟು ಸಾಲವನ್ನು ವಿತರಿಸಲಾಗಿದೆ.

ಇ) ಇವರುಗಳ ಪೈಕಿ 783747 ರೈತರು ಸಾಲವನ್ನು ಮರುಪಾವತಿ ಮಾಡಿರುತ್ತಾರೆ ಇದರ ಮೊತ್ತ ರೂ.2809.22 ಕೋಟಿಗಳಷ್ಟಾಗಿರುತ್ತದೆ.